## ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು
## ಸ್ನಾತಕ ಐಚ್ಚಿಕ ಕನ್ನಡ ಪಠ್ಯಕ್ರಮ (2026-27 ರಿಂದ)

## ಐದನೇ ಚತುರ್ಮಾಸ
# ಪತ್ರಿಕೆ–5 ಕನ್ನಡ ವ್ಯಾಕರಣ : ಶಬ್ದಮಣಿದರ್ಪಣಂ

ಪತ್ರಿಕೆಯ ಬೋಧನಾ ಅವಧಿ: 06 ಗಂಟೆ — ಲಿಖಿತ ಪರೀಕ್ಷೆ: 80
ಪರೀಕ್ಷೆಯ ಒಟ್ಟು ಅಂಕಗಳು: 100 — ಆಂತರಿಕ ಅಂಕ: 20

---

ಘಟಕ – 1 **ಪೀಠಿಕಾ ಪ್ರಕರಣ**

1. ಪ್ರಾಚೀನ ಕನ್ನಡ ವ್ಯಾಕರಣ ಪರಂಪರೆ ಮತ್ತು ಪ್ರಮುಖ ಕೃತಿಗಳು, ಕವಿರಾಜಮಾರ್ಗ, ಶಬ್ದಸ್ಮೃತಿ, ಕರ್ಣಾಟಕ ಭಾಷಾಭೂಷಣ, ಶಬ್ದಾನುಶಾಸನ ಹಾಗೂ ಶಬ್ದಮಣಿದರ್ಪಣ
2. ವಾಗ್ದೇವಿಯ ಸ್ಮರಣೆ, ಕೇಶಿರಾಜನಕಾಲ, ದೇಶ, ಜೀವನವಿವರ, ಕೃತಿಪರಿಚಯ ಶಬ್ದೋತ್ಪತ್ತಿ ವಿಧಾನ, ವ್ಯಾಕರಣಪ್ರಯೋಜನಗಳು

ಘಟಕ – 2 **ಸಂಧಿಪ್ರಕರಣ**

1. ಶುದ್ಧಾಕ್ಷರಗಳು, ರಳ-ಕುಳ-ಕ್ಷಳ, ಸ್ವರಗಳು, ವ್ಯಂಜನಗಳು, ಬಿಂದು, ಅನುಸ್ವಾರ, ವಿಸರ್ಗ, ಸಹಜ ವರ್ಣಗಳು, ನಾಮಿ, ಸಂಧ್ಯಕ್ಷರಗಳು, ಕನ್ನಡದಶುದ್ಧಗೆ, ಮಹಾಪ್ರಾಣಗಳು ಮತ್ತು ವಿಭಕ್ತಿ ಪ್ರತ್ಯಯಗಳು.
2. ಕನ್ನಡಸಂಧಿಗಳು, ಪದಮಧ್ಯಸಂಧಿ, ಪದಾಂತ್ಯಸಂಧಿ, ಸ್ವರಸಂಧಿಗಳು, ಯಕಾರಾಗಮ ವಕಾರಾಗಮ ಸಂಧಿಗಳು, ವಿಸಂಧಿ, ಸಂಧಿದೋಷ, ಸಂಧಿವಿಕಲ್ಪ, ಶ್ರುತಿಸಹ್ಯಸಂಧಿ, ಶ್ರುತಿಕಷ್ಟಸಂಧಿ ಹಾಗೂ ವ್ಯಂಜನಸಂಧಿಗಳು.

ಘಟಕ – 3 **ನಾಮಪ್ರಕರಣ**

1. ಲಿಂಗ (ನಾಮಪ್ರಕೃತಿ) ಕೃದಂತಲಿಂಗ, ತದ್ಧಿತಲಿಂಗ, ಸಮಾಸಲಿಂಗ, ನಾಮಲಿಂಗ ಮತ್ತು ಸಹಜ ನಾಮಗಳು.
2. ಲಿಂಗಮೊಂಬತ್ತುತೆರಂ (ಲಿಂಗವಿವಕ್ಷೆ), ವಚನಗಳು, ವಿಭಕ್ತಿಪಲ್ಲಟ, ವಚನಪಲ್ಲಟ, ಆಧ್ಯಾರೋಪ ಹಾಗೂ ಜಾತ್ಯೇಕ ವಚನ.

ಘಟಕ – 4 **ಸಮಾಸ ಪ್ರಕರಣ**

1. ಸಮಾಸ ಎಂದರೇನು? ಸಂಸ್ಕೃತದ ಷಟ್ಸಮಾಸಗಳು, ಸಮಾಸದ ವ್ಯಾಖ್ಯಾನ, ಲೋಪ ಆಗಮ – ಆದೇಶ, ತತ್ಪುರುಷ, ಕರ್ಮಧಾರಯ, ದ್ವಿಗು, ಬಹುವ್ರೀಹಿ, ದ್ವಂದ್ವ, ಅಂಶಿ (ಅವ್ಯಯಿಭಾವ) ಕ್ರಿಯಾ, ಗಮಕ ಸಮಾಸಗಳು ಹಾಗೂ ಅರಿ ಸಮಾಸ
2. ಕನ್ನಡದಅಸಾಧಾರಣಲಕ್ಷಣಗಳು.

* * * * *

## ಪರಾಮರ್ಶನ ಗ್ರಂಥಗಳು


1. ನರಸಿಂಹಾಚಾರ್, ಡಿ. ಎಲ್, ಕೇಶೀರಾಜ ವಿರಚಿತ ಶಬ್ದಮಣಿದರ್ಪಣಂ, ಕಾವ್ಯಾಲಯ, ಪ್ರಕಾಶಕರು, ಮೈಸೂರು -೪. 1980
2. ಪೂಜಾರ್, ಮ, ಪ್ರ, ಕೆಲವು ಕನ್ನಡ ವ್ಯಾಕರಣ ವಿಚಾರಗಳು, ಕನ್ನಡ ರೀಸರ್ಚ್ ಇನಿಸ್ಟ್ಯೂಟ್, ಧಾರವಾಡ, 1952
3. ವೆಂಕಟಾಚಲಶಾಸ್ತ್ರಿ, ಟಿ,ವಿ, ಹೊಸಗನ್ನಡ ವ್ಯಾಕರಣ ಛಂದಸ್ಸು ಮತ್ತು ವ್ಯಾವಹಾರಿಕ ಕನ್ನಡ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2014
4. ವೆಂಕಟಾಚಲಶಾಸ್ತ್ರಿ, ಟಿ,ವಿ, ಕೇಶೀರಾಜ ವಿರಚಿತ ಶಬ್ದಮಣಿದರ್ಪಣಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2015
5. ನಾರಾಯಣ. ಕೆ. ವಿ, ಭಾಷೆ, ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000
6. ಪೂಜಾರ್, ವಿ, ಜಿ, ಕನ್ನಡ ವ್ಯಾಕರಣ ಮತ್ತು ಭಾಷೆ, ಚೇತನ ಪ್ರಕಾಶನ, ಗುಲ್ಬರ್ಗಾ, 2008
7. ಶಂಕರ್ ಭಟ್, ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಭಾಷಾ ಪ್ರಕಾಶನ, ಮೈಸೂರು, 2006
8. ಕೃಷ್ಣಯ್ಯ. ಎಂ. ಎಚ್, ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, 2016
9. ಸೀತಾರಾಮಯ್ಯ, ಎಂ. ವಿ, ಪ್ರಾಚೀನ ಕನ್ನಡ ವ್ಯಾಕರಣಗಳು, ಕನ್ನಡ ಅಧ್ಯಯನ ಸಂಸ್ಥೆ , ಮೈಸೂರು ವಿಶ್ವವಿದ್ಯಾಲಯ, ಮೈಸೂರು. 1979,
10. ಶಂಕರಭಟ್, ಡಿ.ಎನ್. ಕನ್ನಡ ವ್ಯಾಕರಣ ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2002
11. ಬಿಳಿಗಿರಿ. ಎಚ್, ಎಸ್, ಆಲೋಕ, (ಶಬ್ದಮಣಿದರ್ಪಣ ಭಾಷ್ಯ) ಅಕ್ಷರ ಪ್ರಕಾಶನ, ಹೆಗ್ಗೋಡು, 1969
12. ಶ್ರೀಕಂಠಯ್ಯ, ತೀ. ನಂ, ಕನ್ನಡ ಮಧ್ಯಮ ವ್ಯಾಕರಣ, ಮೋದಿ ಪವರ್ ಪ್ರೆಸ್, ಬೆಂಗಳೂರು, 1949
13. ಸಾಸನೂರು. ಬಿ. ಟಿ, ಕಲಬುರ್ಗಿ. ಎಂ, ಎಂ, ಶಬ್ದಮಣಿದರ್ಪಣ ಸಂಗ್ರಹ, ಸಪ್ನ ಬುಕ್ ಹೌಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, 2014


(ಈ ವಿಷಯಕ್ಕೆ ಸಂಬಂಧಿಸಿದಂತೆ ಇನ್ನಿತರ ಪುಸ್ತಕ ಮತ್ತು ಲೇಖನಗಳನ್ನು ಗಮನಿಸಬಹುದು)

## ಪ್ರಸ್ತಾವನೆ

ವಿದ್ಯಾರ್ಥಿಗಳಿಗೆ ಪದವಿ ಹಂತದಲ್ಲಿ ಕನ್ನಡ ಭಾಷೆ ಮತ್ತು ವ್ಯಾಕರಣದ ಅಧ್ಯಯನವು ಅತ್ಯಂತ ಅವಶ್ಯಕವಾಗಿದೆ. ಒಂದು ಭಾಷೆಯ ಚಾರಿತ್ರಿಕ ವಿಕಾಸ ಮತ್ತು ವ್ಯಾಕರಣದ ಬೆಳವಣಿಗೆಯನ್ನು ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ಕಲಿಸಬೇಕಿದೆ. ಇದರಿಂದಾಗಿ ಕನ್ನಡ ಭಾಷೆ ಮತ್ತು ವ್ಯಾಕರಣಗಳ ಮೂಲಭೂತ ಅಂಶಗಳನ್ನು ವಿದ್ಯಾರ್ಥಿಗಳು ಕಲಿಯುತ್ತಾರೆ.

ಕನ್ನಡವನ್ನು ಭಾಷಾ ವಿಷಯವಾಗಿ, ಮುಕ್ತ ಆಯ್ಕೆ (ಓಪನ್ ಎಲೆಕ್ಟಿವ್) ವಿಷಯವಾಗಿ ಹಾಗೂ ಐಚ್ಛಿಕ ಕನ್ನಡ ವಿಷಯವಾಗಿ ವಿವಿಧ ರೂಪಗಳಲ್ಲಿ ಕಲಿಯುವ ಅವಕಾಶವಿದೆ. ಇದರ ಉದ್ದೇಶ ಸ್ಪಷ್ಟವಾಗಿದೆ. ವ್ಯಾಕರಣದ ಅಧ್ಯಯನದಿಂದ ಭಾಷಾಶುದ್ಧಿಯ ಜೊತೆಗೆ ಪ್ರಾಯೋಗಿಕ ಜ್ಞಾನವು ವೃದ್ಧಿಸುತ್ತದೆ. ಭಾಷೆಯ ಮೂಲಕ ಪರಿಣಾಮಕಾರಿ ಸಂವಹನ ಕೌಶಲ ಅಭಿವೃದ್ಧಿಯಾಗುತ್ತದೆ. ಯಾವುದೇ ವಿಷಯವನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಭಾಷೆ ಹಾಗೂ ವ್ಯಾಕರಣದ ಸ್ಪಷ್ಟ ತಿಳುವಳಿಕೆಯ ಪರಿಣಿತಿಯು ಅತ್ಯವಶ್ಯಕ. ಕನ್ನಡ ವ್ಯಾಕರಣ ಪರಂಪರೆಯು ಶ್ರೀಮಂತವಾಗಿದ್ದರೂ ಹದಿಮೂರನೆಯ ಶತಮಾನದ ಕೇಶಿರಾಜನ ಶಬ್ದಮಣಿದರ್ಪಣವೇ ಕನ್ನಡ ವ್ಯಾಕರಣದ ಆಧಾರಸ್ತಂಭವಾಗಿದೆ. ದರ್ಪಣದ ಜೊತೆಗಿನ ಇತರೆ ಕೃತಿಗಳ ತಿಳುವಳಿಕೆ ಹಾಗೂ ಕನ್ನಡ ವ್ಯಾಕರಣದ ವೈಶಿಷ್ಟ್ಯತೆಗಳನ್ನು ಅರಿಯುವುದು ಅವಶ್ಯವಿದೆ.

ಶಬ್ದಮಣಿದರ್ಪಣದ ಓದು ಹಳಗನ್ನಡ ಹಾಗೂ ನಡುಗನ್ನಡದ ಸ್ವರೂಪವನ್ನು ಕಟ್ಟಿಕೊಡುವುದರ ಜೊತೆಗೆ ಕನ್ನಡ ಹಾಗೂ ಕನ್ನಡ ಸಾಹಿತ್ಯದ ಬಗೆಗೆ ಅಭಿಮಾನ ಮೂಡಿಸುತ್ತದೆ. ವಿದ್ಯಾರ್ಥಿಗಳನ್ನು ಹಳಗನ್ನಡದ ಓದಿಗೆ ಪ್ರೇರೇಪಿಸಲು ಸಾಧ್ಯವಿದೆ. ವ್ಯಾಕರಣದ ಜೊತೆಗೆ ಕನ್ನಡ ಪಂಡಿತ ಪರಂಪರೆಯನ್ನು, ಕಾವ್ಯದ ಸಾಂಗತ್ಯವನ್ನು, ಕಟ್ಟುನಿಟ್ಟಾದ ಶಿಸ್ತಿನಪಾತಳಿಗಳನ್ನು ಹಾಗೂ ವಿನಯದ ವಿವೇಕವನ್ನು ಕಲಿಸಿಕೊಡುತ್ತದೆ. ಇದರ ಅಧ್ಯಯನವು ಉತ್ತಮ ಹಾಗೂ ಸದೃಢ ನಾಗರಿಕರನ್ನಾಗಿಸಿ, ದೇಶ ಮತ್ತು ನಾಡಿನ ಸಾಂಸ್ಕೃತಿಕ ವಲಯದ ಏಳಿಗೆಗೆ ಕೊಡುಗೆ ನೀಡುವ ಮನೋಭಾವವನ್ನು ಬೆಳೆಸುತ್ತದೆ. ಹೀಗಾಗಿ ಕನ್ನಡ ವ್ಯಾಕರಣ ಮತ್ತು ಸಾಹಿತ್ಯದ ಅಧ್ಯಯನವು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ಗೆಪೂರಕವಾಗುತ್ತದೆ.

**ಉದ್ದೇಶಗಳು**

1. ಪ್ರಾಚೀನ ಭಾರತೀಯ ಭಾಷೆಗಳಲ್ಲಿ ಕನ್ನಡದ ವೈಯಾಕರಣಿಗಳು ಒಂದು ಸಶಕ್ತ ಭಾಷೆಯನ್ನು ಕಟ್ಟುವ ಸಲುವಾಗಿ ರೂಪಿಸುತ್ತಾ ಬಂದ ವ್ಯಾಕರಣ ಪರಂಪರೆಯ ಕುರಿತು ವಿವರಿಸುವುದು.
2. ಭಾರತದ ಪ್ರಾಚೀನ ಭಾಷಾ ಪರಂಪರೆಯಲ್ಲಿ ಕನ್ನಡಕ್ಕೆ ತನ್ನದೇ ಆದ ವ್ಯಾಕರಣವನ್ನು ಕಟ್ಟಿಕೊಳ್ಳುವಲ್ಲಿ ಇದ್ದ ಚಾರಿತ್ರಿಕ ಅಂಶಗಳನ್ನು ವಿಶ್ಲೇಷಿಸುವುದು. ಇದರ ಜೊತೆಗೆ ಈ ವ್ಯಾಕರಣ ಪರಂಪರೆಯ ಉಗಮ ಮತ್ತು ವಿಕಾಸದ ಹಿಂದಿರುವ ಚಾರಿತ್ರಿಕ ಒತ್ತಡಗಳನ್ನು ವಿವರಿಸುವುದು.
3. ಕನ್ನಡದ ವ್ಯಾಕರಣ ಮತ್ತು ಭಾಷಾ ಮೀಮಾಂಸೆಯ ಅನನ್ಯತೆಗಳನ್ನು ವಿವರಿಸುವುದು.
4. ಕನ್ನಡ ವ್ಯಾಕರಣದ ವೈಶಿಷ್ಟ್ಯತೆಯನ್ನು ವಿವರಿಸುವುದು. ಅರಿವು
5. ಕನ್ನಡ ಭಾಷೆ ಮತ್ತು ವ್ಯಾಕರಣದ ಮೇಲೆ ಪ್ರಾಕೃತ ಹಾಗೂ ಸಂಸ್ಕೃತ ಭಾಷೆಗಳ ಪ್ರಭಾವಗಳನ್ನು ವಿಶ್ಲೇಷಿಸುವುದು.

**ಫಲಿತಗಳು :**

1. ಕನ್ನಡ ಭಾಷಾ ವ್ಯಾಕರಣ ಪರಂಪರೆಯನ್ನು ಪರಿಚಯಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆ ಮತ್ತು ವ್ಯಾಕರಣ ಪರಂಪರೆಗಳ ಅರಿವು ಮೂಡುತ್ತದೆ.
2. ಹಳಗನ್ನಡದ ಭಾಷಾಸ್ವರೂಪ, ವ್ಯಾಕರಣದ ಚಾರಿತ್ರಿಕ ಬೆಳವಣಿಗೆಯನ್ನು ಅಧ್ಯಾಪಕರು ವಿಶ್ಲೇಷಿಸುವುದರಿಂದಾಗಿ ವಿದ್ಯಾರ್ಥಿಗಳಲ್ಲಿ ಕನ್ನಡದ ಪಂಡಿತ ಪರಂಪರೆಯ ಅರಿವು ಮೂಡುತ್ತದೆ.
3. ಒಂದು ಭಾಷೆ ಮತ್ತು ಅದರ ವ್ಯಾಕರಣ ಪರಂಪರೆಯ ಕುರಿತ ಎಚ್ಚರವು ಸಮಕಾಲೀನ ಭಾಷಾ ಸಂಶೋಧನೆಗೆ ಪ್ರೇರಣೆಯನ್ನು ಒದಗಿಸುತ್ತದೆ.
4. ಇದರಿಂದಾಗಿ ಹೊಸ ತಲೆಮಾರಿನ ವಿದ್ಯಾರ್ಥಿಗಳಲ್ಲಿ ಹಳಗನ್ನಡ ಸಾಹಿತ್ಯ ಮತ್ತು ಶಾಸ್ತ್ರ ಸಾಹಿತ್ಯದ ಒದು ವಿಕಾಸವಾಗುತ್ತದೆ.

* * * * *

DSC

ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು
ಸ್ನಾತಕ ಐಚ್ಛಿಕ ಕನ್ನಡ ಪಠ್ಯಕ್ರಮ (2026-27ರಿಂದ)

## ಐದನೇ ಚತುರ್ಮಾಸ
## ಪತ್ರಿಕೆ 6 ವಚನ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯ

ಪತ್ರಿಕೆಯ ಬೋಧನಾ ಅವಧಿ: 06 ಗಂಟೆ — ಲಿಖಿತ ಪರೀಕ್ಷೆ: 80
ಪರೀಕ್ಷೆಯ ಒಟ್ಟು ಅಂಕಗಳು: 100 — ಆಂತರಿಕ ಅಂಕಗಳು: 20

**ಘಟಕ– 1. ವಚನ ಮತ್ತು ಕೀರ್ತನ ಸಾಹಿತ್ಯದ ತಾತ್ವಿಕತೆ**

- ವಚನ ಚಳುವಳಿ ಒಂದು ಒಳನೋಟ - ಡಾ. ಬಸವರಾಜಸಬರದ
- ಕೀರ್ತನ ಸಾಹಿತ್ಯ ಒಂದು ಪ್ರವೇಶ – ಪ್ರೊ. ಎ.ವಿ. ನಾವಡ

**ಘಟಕ - 2. ವಚನ ಚಳುವಳಿಯ ತಾತ್ವಿಕತೆ**

2.1. **ವಚನತತ್ವ:**

1. ಕಂಗಳ ಮುಂದಣ ಕತ್ತಲೆ ಇದೇನೋ- ಅಲ್ಲಮಪ್ರಭು
2. ಆಡಬಾರದ ಬಯಲು- ಜೇಡರದಾಸಿಮಯ್ಯ
3. ಆನೆಂಬುದಿಲ್ಲ ನೀನೆಂಬುದಿಲ್ಲ - ಚೆನ್ನಬಸವಣ್ಣ
4. ಗುರುವೆಂಬ ತೆತ್ತಿಗನು ಲಿಂಗವೆಂಬಲಗನು - ಅಕ್ಕಮಹಾದೇವಿ
5. ತನುವೆಂಬಹುತ್ತಕ್ಕೆಮನವೆಂಬಸರ್ಪಆವರಿಸಿ- ಹಡಪದಲಿಂಗಮ್ಮ

2.2. **ಸ್ತ್ರೀತತ್ವ**

1. ಇನಿಯಂಗೆ ತವಕವಿಲ್ಲ ಎನಗೆ ಸೈರಣೆಯಿಲ್ಲ- ಸತ್ಯಕ್ಕ
2. ಗಂಡುಮೋಹಿಸಿಹೆಣ್ಣಹಿಡಿದಡೆ - ಗೊಗ್ಗವ್ವೆ
3. ಎಲ್ಲರ ಹೆಂಡಿರು ತೊಳ ಸಿಕ್ಕುವರು - ಕದಿರೆ ರೆಮ್ಮವ್ವೆ
4. ಹೊನ್ನ ಬಿಟ್ಟು ಹೆಣ್ಣ ಬಿಟ್ಟು ಮಣ್ಣ ಬಿಟ್ಟು - ಉರಿಲಿಂಗಪೆದ್ದಿ
5. ತಾ ನೋಡಿದ ಹೆಣ್ಣು ತನ್ನ ತಲೆಯೇರಿತ್ತು- ಸಿದ್ಧರಾಮ

2.3 **ಶ್ರಮತತ್ವ**

1. ಆಸೆಯೆಂಬುದು ಅರಸಂಗಲ್ಲದೆ - ಆಯ್ದಕ್ಕಿಲಕ್ಕಮ್ಮ
2. ತವನಿಧಿಯ ಬೆಳೆವಂಗೆ ಕಣಜದ ಹಂಗುಂಟೆ - ಆಯ್ದಕ್ಕಿಮಾರಯ್ಯ
3. ದೊಡ್ಡದೊಡ್ಡ ಶೆಟ್ಟಿಗಳ ಕಂಡು - ಅಂಬಿಗರಚೌಡಯ್ಯ
4. ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ - ಸೂಳೆಸಂಕವ್ವೆ
5. ಪಂಚೇಂದ್ರಿಯಂಗಳಲ್ಲಿ ಒಂದರ
   ಗುಣವ ಒಂದರಿಯದಿರೆ - ಧೂಳಯ್ಯ

2.4. **ಸಮಾನತೆತತ್ವ**

1. ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ - ಬಸವಣ್ಣ
2. ಶುಕ್ಲ ಶೋಣಿತ ಮಜ್ಜೆ ಮಾಂಸ ಹಸಿವು - ಮಾದಾರಚನ್ನಯ್ಯ
3. ನಡೆದು ನಡೆದು ಕಡೆಯ ಕಂಡವರು - ಮುಕ್ತಾಯಕ್ಕ
4. ಕೃತ್ಯಕಾಯಕವಿಲ್ಲದವರು - ಕಾಳವ್ವೆ
5. ನಾನಾವರ್ಣದ ಗೋವುಗಳೆಲ್ಲಾ ಕೂಡಿ - ಕೇಲಾರದಭೀಮಣ್ಣ

**ಘಟಕ 3. ಕೀರ್ತನ ಚಳುವಳಿಯ ತಾತ್ವಿಕತೆ**

**3.1. ಕೀರ್ತನ ತತ್ವ**

1. ಅಂತರಂಗದಲ್ಲಿ ಹರಿಯ ಕಾಣದವನೆ - ವ್ಯಾಸರಾಯರು
2. ಏನು ಸುಖವೋ ಎಂಥಾ ಸುಖವೋ - ವ್ಯಾಸರಾಯರು
3. ಇಟ್ಯಾಂಗೆ ಇರುವೆನೊ ಹರಿಯೆ, ಎನ್ನ ದೊರೆಯೆ - ಶ್ರೀಪಾದರಾಯ
4. ಪಾಲೊಳಗದ್ದು ನೀರೊಳಗದ್ದು - ಶ್ರೀಪಾದರಾಯ

**3.2. ಕೀರ್ತನ – ಸಾಮಾಜಿಕತೆ**

1. ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ - ಪುರಂದರದಾಸರು
2. ಜಾಲಿಯ ಮರದಂತೆ ಧರೆಯೊಳು ದುರ್ಜನರು - ಪುರಂದರದಾಸರು
3. ತಲ್ಲಣಿಸದಿರು ಕಂಡ್ಯ ತಾಳು ಮನವೆ - ಕನಕದಾಸರು
4. ಕುಲಕುಲಕುಲವೆನ್ನುತಿಹರು - ಕನಕದಾಸರು

**3.3. ಕೀರ್ತನ – ತಳಸ್ತರದಚಿಂತನೆ**

1. ಏಸು ರೂಪಾಯಿಗೆ ಕೊಂಡುಕೊಂಡೆವ್ವ - ರಾಮದಾಸ
2. ಮಡಿ ಮಡಿಮಡಿಯೆಂದು ಹಾರಾಡಿ ಸುಳ್ಳೆ - ರಾಮದಾಸ
3. ಮನಸು ನಿಲಿಸುವುದು ಬಹಳ ಕಷ್ಟ - ವಿಜಯದಾಸ
4. ಹರಿದಾಸನಾದರೆ ಹ್ಯಾಗಿರಬೇಕು - ವಿಜಯದಾಸ

**3.4. ಕೀರ್ತನ - ವೈಚಾರಿಕತೆ**

1. ಮನದ ಅಭಿಮಾನಿಗಂತರ್ಯಾಮಿ ಸ್ವಾಮಿ - ಹೆಳವನಕಟ್ಟೆಗಿರಿಯಮ್ಮ
2. ಏನಿದು ಬಯಲ ಪಾಶ ನೋಡಿದದರಿಲ್ಲಿ - ಹೆಳವನಕಟ್ಟೆಗಿರಿಯಮ್ಮ
3. ಕಲ್ಲು ನಾಯೇನೋ ಕೈವಲ್ಯದಾಯಕನೆ - ಹರಪನಹಳ್ಳಿ ಭೀಮವ್ವ
4. ಯಾತಕವನಿಯೊಳ್ ಜನಿಸಿದೆ ನಾನು - ಹರಪನಹಳ್ಳಿ ಭೀಮವ್ವ

**ಘಟಕ 4. ವಚನ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯ: ವಿಶ್ಲೇಷಣೆ**

1. ಕನ್ನಡ ಸಾಹಿತ್ಯದಲ್ಲಿ ವಚನ ಸ್ವರೂಪ ಮತ್ತು ಜಾಗತಿಕ ಸಾಹಿತ್ಯಕ್ಕೆ ಅದರ ಕೊಡುಗೆ – ಡಾ. ಪಿ.ವಿ.ನಾರಾಯಣ
2. ದಾಸ ಸಾಹಿತ್ಯದಲ್ಲಿ ಮಹಿಳಾಪರ ಕಾಳಜಿಗಳು – ಡಾ. ಸಬಿಹಾಭೂಮಿಗೌಡ

**ಸೂಚನೆ: ವಿದ್ಯಾರ್ಥಿಗಳಿಗೆ ಮೊದಲ ಹಾಗೂ ನಾಲ್ಕನೇಯ ಅಧ್ಯಾಯದ ಲೇಖನಗಳ ಪ್ರಮುಖ ಸಾರವನ್ನಷ್ಟೇ ಬೋಧಿಸುವುದು**

* * * * *

**ಪರಾಮರ್ಶನಗ್ರಂಥಗಳು**


1. ಜಯಸಿಂಹ, ಹರಪನಹಳ್ಳಿ ಭೀಮವ್ವ, ಪರಿಮಳ ಪ್ರಕಾಶನ, ಬೆಂಗಳೂರು, 1992.
2. ಶ್ರೀಪಾದರಾಯರ ಮತ್ತು ಶ್ರೀವ್ಯಾಸರಾಯರಕೀರ್ತನೆಗಳು, ಶ್ರೀಕೃಷ್ಣ ಪ್ರೆಸ್, ಉಡುಪಿ, 1924
3. ಕಾಕೋಳು ಸರೋಜಾರಾವ್, ಹೆಳವನಕಟ್ಟೆ ಗಿರಿಯಮ್ಮ, ಚಂದ್ರಿಕಾ ಪ್ರಕಾಶನ, ಬೆಂಗಳೂರು, 1994
4. ನಾಗಭೂಷಣಸ್ವಾಮಿ. ಓ. ಎಲ್, ವಚನ ಸಾವಿರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014

5. ಕಲಬುರ್ಗಿ. ಎಂ. ಎಂ, ಸಮಗ್ರ ವಚನ ಸಂಪುಟಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. 2004
6. ಕಲಬುರ್ಗಿ. ಎಂ. ಎಂ, ಮಾರ್ಗ ಸಂಪುಟ: 3, ಸಪ್ನ ಬುಕ್ ಹೌಸ್, ಬೆಂಗಳೂರು, 2010
7. ಹೊನ್ನುಸಿದ್ದಾರ್ಥ, ಸಿ. ಬಿ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ - ಸಂಪುಟ- 3 (ಭಾಗ-1), (ಸಂ) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 2014
8. ಚಿತ್ತಯ್ಯಪೂಜಾರ್ , ಡಿ. ಕೆ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ- 4 (ಭಾಗ-2), (ಸಂ) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 2014
(ಈ ವಿಷಯಕ್ಕೆ ಸಂಬಂಧಿಸಿದಂತೆ ಇನ್ನಿತರ ಗ್ರಂಥ, ಲೇಖನಗಳನ್ನು ಗಮನಿಸಬಹುದು)

**ಪ್ರಸ್ತಾವನೆ:**

ಪದವಿ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಕನ್ನಡ ಭಾಷೆಯ ಅಧ್ಯಯನವು ಅತ್ಯಂತ ಅವಶ್ಯಕವಾಗಿದೆ. ಇದು ವ್ಯಕ್ತಿತ್ವ ವಿಕಾಸ ಹಾಗೂ ಜೀವನೋನ್ನತಿಗೆ ಪೂರಕವಾಗುತ್ತದೆ. ಕನ್ನಡವನ್ನು ಭಾಷಾ ವಿಷಯವಾಗಿ, ಮುಕ್ತ ಆಯ್ಕೆ (ಓಪನ್ ಎಲೆಕ್ಟಿವ್) ವಿಷಯವಾಗಿ ಹಾಗೂ ಐಚ್ಛಿಕ ಕನ್ನಡ ವಿಷಯವಾಗಿ ವಿವಿಧ ರೂಪಗಳಲ್ಲಿ ಕಲಿಯುವ ಅವಕಾಶವಿದೆ. ಪ್ರಸ್ತುತ ಅವಧಿಯ ಬೋಧನೆಯಲ್ಲಿ ವಿದ್ಯಾರ್ಥಿಗಳಿಗೆ ಮಧ್ಯಕಾಲೀನ ಸಾಹಿತ್ಯವನ್ನು ಪರಿಚಯಿಸುವ ಅಗತ್ಯವಿದೆ. ಅದರಲ್ಲೂ 12ನೇ ಶತಮಾನದಲ್ಲಿ ನಿರ್ದಿಷ್ಟ ಸಾಮಾಜಿಕ ಬದಲಾವಣೆಗೋಸ್ಕರ ಆರಂಭದವಾದ ವಚನ ಚಳುವಳಿಯ ವೈಚಾರಿಕತೆಯನ್ನು ಈ ಅವಧಿಯಲ್ಲಿ ವಿಶ್ಲೇಷಿಸಬೇಕಿದೆ. ಇದರ ಜೊತೆಗೆ ವಚನ ಚಳುವಳಿಯ ಮುಂದುವರಿಕೆಯಂತಿರುವ ಆದರೆ ಹೆಚ್ಚು ಭಕ್ತಿ ಮಾರ್ಗದಲ್ಲಿ ಸಾಗಿದ ಕೀರ್ತನಕಾರರ ಸಾಮಾಜಿಕ ನಿಲುವಗಳನ್ನು ವಿದ್ಯಾರ್ಥಿಗಳಿಗೆ ಪರಚಯಿಸುವ ಅಗತ್ಯವಿದೆ. ಈ ಕಾರಣಕ್ಕಾಗಿ ಈ ಎರಡೂ ಚಳುವಳಿಗಳ (ವಚನ ಮತ್ತು ದಾಸ ಸಾಹಿತ್ಯ) ಸಾಹಿತ್ಯಿಕ ತತ್ವ, ಸಾಮಾಜಿಕ ತತ್ವ, ಸಮಾನತೆಯ ತತ್ವಗಳನ್ನು ಆ ಕಾಲದ ಪಠ್ಯಗಳ ಮೂಲಕ ವಿಶ್ಲೇಷಿಸಬೇಕಿದೆ. ಈ ಕಾರಣಕ್ಕಾಗಿ ಆಯಾ ಕಾಲಘಟ್ಟದ ಆದ್ಯ ವಚನಕಾರರ ಮತ್ತು ದಾಸರ ಕೆಲ ಪಠ್ಯಗಳನ್ನು ಇಲ್ಲಿ ನೀಡಲಾಗಿದೆ. ಈ ಪಠ್ಯಗಳ ಜೊತೆಗೆ ವಚನಕಾರರ ಮತ್ತು ದಾಸ ಪಂಥದ ಮೂಲಭೂತ ವೈಚಾರಿಕತೆಯನ್ನು ವಿವರಿಸುವ ಎರಡು ಬರಹಗಳನ್ನು ನೀಡಲಾಗಿದೆ. ಪ್ರಸ್ತುತ ಅವಧಿಯಲ್ಲಿ ಕರ್ನಾಟಕದ ಮಧ್ಯಕಾಲೀನ ಸಾಹಿತ್ಯದ ವೈಚಾರಿಕ ಪರಂಪರೆಯನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕಿದೆ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಇಡಿಯಾಗಿ ಓದಿರುವ ವಿದ್ಯಾರ್ಥಿಯು ಬಿಡಿಬಿಡಿಯಾಗಿಯೂ ತಿಳಿಯಬೇಕಿದೆ. ನಡುಗನ್ನಡ ಕಾಲಘಟ್ಟಗಳ ಸಾಹಿತ್ಯರೂಪಗಳ ವೈಭವವನ್ನು ತಿಳಿದು ಸಂಭ್ರಮಿಸಬೇಕಿದೆ. ವಿಶ್ವಸಾಹಿತ್ಯದಲ್ಲಿ ಅಪರೂಪವೆನಿಸಿದ, ಕನ್ನಡದ ಅಸ್ಮಿತೆಯಂತಿರುವ ವಚನಸಾಹಿತ್ಯವನ್ನು ಆಳವಾದ ಅಧ್ಯಯನಕ್ಕೆ ಒಳಪಡಿಸಬೇಕಿದೆ. ಹನ್ನೆರಡನೇಯ ಶತಮಾನದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗೆ ಕಾರಣವಾದ ವಚನಸಾಹಿತ್ಯ, ವಚನಕಾರರ ವೈಶಿಷ್ಟ್ಯಗಳನ್ನು ತಿಳಿಯುವ ಅಗತ್ಯವಿದೆ. ಅದರಂತೆ ನಡುಗನ್ನಡ ಕಾಲಘಟ್ಟದ ಭಕ್ತಿ ಹಾಗೂ

ವೈಚಾರಿಕ ಪರಂಪರೆಯ ಪ್ರತೀಕದಂತಿರುವ ಹರಿದಾಸ ಪರಂಪರೆಯನ್ನು ಹಾಗೂ ಕೀರ್ತನ ಸಾಹಿತ್ಯವನ್ನು ವಿವೇಚಿಸುವುದು ಅವಶ್ಯಕವಾಗಿದೆ.

ವರ್ಗ, ವರ್ಣ, ಲಿಂಗ ಹಾಗೂ ಜಾತಿಭೇದಗಳ ಗಡಿಯನ್ನು ದಾಟಿದ ಅನುಭವ ಮಂಟಪಕ್ಕೆ ಸಾಕ್ಷಿಯಂತಿರುವ ವಚನಗಳ, ಕೀರ್ತನೆಗಳ ಅಧ್ಯಯನ ಮಾಡಬೇಕಿದೆ. ಕಾಯಕ, ದಾಸೋಹ ಹಾಗೂ ಸಾಮಾಜಿಕ ಸಮಾನತೆಗೆ ಒತ್ತು ನೀಡಿರುವ ವಿವಿಧ ವಚನಕಾರರ ವೈಶಿಷ್ಟ್ಯತೆಗಳನ್ನು ಪರಿಚಯಿಸಬೇಕಿದೆ. ವಚನ ಸಾಹಿತ್ಯದ ಅಂತರ್ಯದಲ್ಲಿ ಹುದುಗಿರುವ ವಿವಿಧ ತತ್ವಗಳ ಅರ್ಥೈಸುವಿಕೆಗೆ ಮಾದರಿಯಾಗುವ ವಿವಿಧ ವಚನಕಾರರ ವಚನಗಳ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಬೇಕಿದೆ. ಅದರಂತೆ ಆಯ್ದ ತತ್ವಗಳ ಸಾಮಾನ್ಯೀಕರಣವನ್ನು ಪ್ರಮಾಣೀಕರಿಸುವ ಕೀರ್ತನೆಗಳ ಅಧ್ಯಯನಕ್ಕೆ ಅವಕಾಶ ನೀಡಲಾಗಿದೆ.

ವಚನ ಸಾಹಿತ್ಯ ಹಾಗೂ ಕೀರ್ತನ ಸಾಹಿತ್ಯದ ಓದು ನಡುಗನ್ನಡ ಸಾಹಿತ್ಯದ ಸ್ವರೂಪವನ್ನು ಕಟ್ಟಿಕೊಡುವುದರ ಜೊತೆಗೆ ಕನ್ನಡ ಹಾಗೂ ಕನ್ನಡ ಸಾಹಿತ್ಯದ ವೈಶಿಷ್ಟ್ಯಗಳ ಬಗೆಗೆ ಅಭಿಮಾನ ಮೂಡಿಸುತ್ತದೆ. ವಿದ್ಯಾರ್ಥಿಗಳನ್ನು ವಚನ-ಕೀರ್ತನೆಗಳ ಓದಿಗೆ ಪ್ರೇರೇಪಿಸಿ ಸುಂದರ ವ್ಯಕ್ತಿತ್ವ ನಿರ್ಮಾಣಕ್ಕೆ ವೇದಿಕೆಯಾಗುತ್ತದೆ. ವಚನಕಾರರ ಬಗೆಗೆ ಬೆರಗನ್ನು ಮೂಡಿಸಿ ಅಭಿಮಾನವನ್ನು ಉಕ್ಕಿಸುತ್ತದೆ. ಸಾಮಾಜಿಕ ಸಮಾನತೆಯ ತಳಹದಿಯ ಮೇಲಿನ ಕನ್ನಡ ಕಾವ್ಯ ಪರಂಪರೆಯ ವೈಚಾರಿಕ ಹೋರಾಟವು ವಿದ್ಯಾರ್ಥಿಗಳಲ್ಲಿ ಉತ್ಸಾಹದ ಬುಗ್ಗೆಯನ್ನು ಮೂಡಿಸಿ ನಾಡಪ್ರೇಮ ಹಾಗೂ ಭಾಷಾಪ್ರೇಮವನ್ನು ಗಟ್ಟಿಗೊಳಿಸುತ್ತದೆ. ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಆಲದ ಮರವಾಗಿ ನಿಲ್ಲುತ್ತದೆ.

**ಈ ಬೋಧನಾವಧಿಯ ಉದ್ದೇಶಗಳು**

1. ವಚನ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯಗಳೆರಡರ ತಾತ್ವಿಕ, ಸಾಮಾಜಿಕ ಹಾಗೂ ಧಾರ್ಮಿಕ ಹಿನ್ನೆಲೆಯನ್ನುಅರ್ಥ ಮಾಡಿಕೊಳ್ಳುವುದು.
2. ಪ್ರಮುಖ ವಚನಕಾರರು ಮತ್ತು ಹರಿದಾಸರ ಜೀವನ ಹಾಗೂ ಸಾಹಿತ್ಯ ಸೇವೆಯನ್ನು ಪರಿಚಯಿಸಿ ಕೊಳ್ಳುವುದು.
3. ವಚನ ಮತ್ತು ಕೀರ್ತನೆಗಳ ಭಾಷೆ, ಶೈಲಿ, ರೂಪ ಹಾಗೂ ಅಭಿವ್ಯಕ್ತಿಯ ವೈಶಿಷ್ಟ್ಯಗಳನ್ನು ಅಧ್ಯಯನ ಮಾಡುವುದು.
4. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ವಚನ ಮತ್ತು ಕೀರ್ತನ ಸಾಹಿತ್ಯದ ಕೊಡುಗೆಯನ್ನು ಮೌಲ್ಯಮಾಪನ ಮಾಡುವುದು.
5. ವಚನ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯಗಳ ಸಾಮ್ಯ-ವೈಶಿಷ್ಟ್ಯಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವುದು.
6. ಸಾಮಾಜಿಕ ಬದಲಾವಣೆ/ ಸುಧಾರಣೆಯಲ್ಲಿ ಈ ಸಾಹಿತ್ಯ ಪ್ರಕಾರಗಳ ಪಾತ್ರವನ್ನು ವಿಶ್ಲೇಷಿಸುವುದು.
7. ಆಧುನಿಕ ಸಮಾಜದಲ್ಲಿ ವಚನ ಮತ್ತು ಕೀರ್ತನೆಗಳ ಪ್ರಸ್ತುತತೆಯನ್ನು ಅರ್ಥ ಮಾಡಿಕೊಳ್ಳುವುದು.
8. ವಚನ ಸಾಹಿತ್ಯದ ಸಾಹಿತ್ಯಿಕ ತತ್ವ, ಸ್ತ್ರೀತತ್ವ, ಶ್ರಮತತ್ವ ಹಾಗೂ ಸಮಾನತೆ ತತ್ವಗಳನ್ನು ಅರ್ಥ ಮಾಡಿಕೊಳ್ಳುವುದು.
9. ಕೀರ್ತನ ಸಾಹಿತ್ಯದ ಸಾಹಿತ್ಯಿಕ ತತ್ವ, ಸಾಮಾಜಿಕತೆ, ತಳಸ್ತರದ ಚಿಂತನೆ (ಸಬಾಲ್ಟ್ರನ್ ಚಿಂತನೆ) ಹಾಗೂ ವೈಚಾರಿಕತೆಯನ್ನು ಅಧ್ಯಯನ ಮಾಡುವುದು.

## ನಿರೀಕ್ಷಿತ ಫಲಿತಗಳು

1. ಪ್ರಮುಖ ವಚನಕಾರರು ಹಾಗೂ ಕೀರ್ತನಕಾರರ ಸಾಹಿತ್ಯವನ್ನು ವಿಶ್ಲೇಷಿಸುವ ಸಾಮರ್ಥ್ಯ ಬೆಳೆಯುತ್ತದೆ.
2. ವಚನ ಮತ್ತು ಕೀರ್ತನೆಗಳಲ್ಲಿರುವ ತಾತ್ವಿಕ ಹಾಗೂ ಸಾಮಾಜಿಕ ಸಂದೇಶಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.
3. ಕನ್ನಡ ಭಕ್ತಿ ಸಾಹಿತ್ಯದ ಬೆಳವಣಿಗೆಯಲ್ಲಿ ಈ ಎರಡು ಪ್ರಕಾರಗಳ ಮಹತ್ವವನ್ನು ಅರಿಯುತ್ತಾರೆ.
4. ವಚನ ಮತ್ತು ಕೀರ್ತನೆಗಳ ಭಾಷಾ, ಶೈಲಿ ಹಾಗೂ ಸಾಹಿತ್ಯಿಕ ಲಕ್ಷಣಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.
5. ತುಲನಾತ್ಮಕ ಸಾಹಿತ್ಯ ಅಧ್ಯಯನದ ದೃಷ್ಟಿಕೋನ ಬೆಳೆಯುತ್ತದೆ.
6. ಕನ್ನಡ ಸಂಸ್ಕೃತಿ, ಆಧ್ಯಾತ್ಮಿಕ ಪರಂಪರೆ ಮತ್ತು ಸಾಮಾಜಿಕ ಬದಲಾವಣೆಗಾಗಿ ನಡೆದ ಈ ಎರಡೂ ಚಳವಳಿಗಳ ಕುರಿತು ಆಳವಾದ ತಿಳುವಳಿಕೆ ದೊರೆಯುತ್ತದೆ.
7. ಸಾಹಿತ್ಯವನ್ನು ವಿಮರ್ಶಾತ್ಮಕವಾಗಿ ಓದಿ, ವಿಶ್ಲೇಷಿಸಿ, ಅಭಿಪ್ರಾಯ ವ್ಯಕ್ತಪಡಿಸುವ ಕೌಶಲ ಬೆಳೆಯುತ್ತದೆ.
8. ವಚನ ಮತ್ತು ಕೀರ್ತನೆಗಳಲ್ಲಿರುವ ಮಾನವೀಯ ಮೌಲ್ಯಗಳನ್ನು ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳುತ್ತಾರೆ.
9. ವಚನ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯದ ಕುರಿತ ಲೇಖನಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ.
10. ಕೀರ್ತನ ಸಾಹಿತ್ಯದಲ್ಲಿನ ಸಾಮಾಜಿಕ ಹಾಗೂ ವೈಚಾರಿಕ ಅಂಶಗಳನ್ನು ವಿಶ್ಲೇಷಿಸಲು ಸಾಧ್ಯವಾಗುತ್ತದೆ. ವಚನ ಮತ್ತು ಕೀರ್ತನ ಸಾಹಿತ್ಯದ ತಾತ್ವಿಕ ಹಾಗೂ ಸಾಮಾಜಿಕ ಕೊಡುಗೆಯನ್ನು ಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತದೆ.

* * * * *

ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು

ಸ್ನಾತಕ ಐಚ್ಛಿಕ ಕನ್ನಡ ಪಠ್ಯಕ್ರಮ (2026-27ರಿಂದ)

## ಐದನೇ ಚತುರ್ಮಾಸ (ಮುಕ್ತಆಯ್ಕೆ): 1 ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ

ಪತ್ರಿಕೆಯ ಬೋಧನಾ ಅವಧಿ: 02 ಗಂಟೆ ಲಿಖಿತ ಪರೀಕ್ಷೆ: 40

ಪರೀಕ್ಷೆಯ ಒಟ್ಟು ಅಂಕಗಳು: 50 ಆಂತರಿಕ ಅಂಕ: 10

---

ಘಟಕ– 1. ಕಾದಂಬರಿ ವಿಭಾಗ

- ರೊಟ್ಟಿ ಮುಟಗಿ - ಟಿ.ಎಸ್. ಗೊರವರ

ಘಟಕ– 2. ಸಣ್ಣಕಥಾ ವಿಭಾಗ

- ದಡವ ಸೇರಿಸು ತಂದೆ - ಅಮರೇಶನುಗಡೋಣಿ

---

## ಪರಾಮರ್ಶನ ಗ್ರಂಥಗಳು


1. ಗೊರವರ್, ಟಿ. ಎಸ್, ರೊಟ್ಟಿ ಮುಟಗಿ (ಕಾದಂಬರಿ), ಸಂಗಾತ ಪುಸ್ತಕ, ಗಜೇಂದ್ರಗಡ, 2016
2. ಅಮರೇಶ ನುಗಡೋಣಿ, ದಡವ ಸೇರಿಸು ತಂದೆ (ಕಥಾಸಂಕಲನ), ಪಲ್ಲವ ಪ್ರಕಾಶನ, ಚನ್ನಪಟ್ಟಣ, 2019


* * * * *

## ಪ್ರಸ್ತಾವನೆ

ಪದವಿ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಕನ್ನಡ ಭಾಷೆಯ ಅಧ್ಯಯನವು ಅತ್ಯಂತ ಅವಶ್ಯಕವಾಗಿದೆ. ಇದು ವ್ಯಕ್ತಿತ್ವ ವಿಕಾಸ ಹಾಗೂ ಜೀವನೋನ್ನತಿಗೆ ಪೂರಕವಾಗುತ್ತದೆ. ಕನ್ನಡವನ್ನು ಭಾಷಾ ವಿಷಯವಾಗಿ, ಮುಕ್ತ ಆಯ್ಕೆ (ಓಪನ್ ಎಲೆಕ್ಟಿವ್)) ವಿಷಯವಾಗಿ ಹಾಗೂ ಐಚ್ಛಿಕ ಕನ್ನಡ ವಿಷಯವಾಗಿ ವಿವಿಧ ರೂಪಗಳಲ್ಲಿ ಕಲಿಯುವ ಅವಕಾಶವಿದೆ. ಈ ಬೋಧನಾವಧಿಯ ಉದ್ದೇಶ ಹೀಗಿದೆ.

ಸಾಮಾನ್ಯ ಕನ್ನಡವು ಒಂದು ಭಾಷಾ ವಿಷಯವಾಗಿ ಸಾಹಿತ್ಯದ ಹಲವು ಮಜಲುಗಳ ಮಾದರಿಗಳನ್ನು ಪರಿಚಯಿಸುವುದರ ಜೊತೆಗೆ ಹಲವು ಕೌಶಲ್ಯಗಳನ್ನು ಕರಗತ ಮಾಡಿಸುತ್ತದೆ. ಐಚ್ಛಿಕ ಕನ್ನಡವಂತೂ ಕನ್ನಡ ಸಾಹಿತ್ಯದ ಪ್ರಾಚೀನ ಚರಿತ್ರೆಯಿಂದ ಇಂದಿನವರೆಗಿನ ಸಮಗ್ರ ಇತಿಹಾಸವನ್ನು, ಏರಿಳಿತಗಳನ್ನು, ಕನ್ನಡದ ಅಸ್ಮಿತೆ ಹಾಗೂ ವೈಶಿಷ್ಟ್ಯಗಳನ್ನು ಪರಿಣಾಮಕಾರಿಯಾಗಿ ಮನದಟ್ಟು ಮಾಡಿಸುತ್ತದೆ. ಆದರೆ ಮುಕ್ತ ಆಯ್ಕೆ ಹಲವು

ವಿಶೇಷತೆಗಳಿಂದ ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡಿಸಬಲ್ಲದು. ಕಲಾ ವಿಭಾಗದ ಇತರೆ ವಿಷಯ-ವಿಭಾಗಗಳ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಇತರೆ ವಿಭಾಗಗಳ ವಿದ್ಯಾರ್ಥಿಗಳಿಗೂ ಕನ್ನಡ ಭಾಷೆ ಹಾಗೂ ಸಾಹಿತ್ಯದ ವಿಭಿನ್ನ ಕೌಶಲಗಳ ವರ್ಧನೆ ಹಾಗೂ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಉಣಬಡಿಸಲು ಸೂಕ್ತವಾದ ಮಾರ್ಗವಿದು. ಈ ನಿಟ್ಟಿನಲ್ಲಿ ತನ್ನ ವಿಭಿನ್ನ ಶಿಸ್ತಿನ ಪಠ್ಯಗಳಿಂದ ಕಳೆದ ಕೆಲವು ವರ್ಷಗಳಿಂದ ಯಶಸ್ವಿಯಾಗುತ್ತಲಿದೆ.

ವಿಷಯ ಗಾಂಭೀರ್ಯದಿಂದ ಮುಕ್ತವಾದ ಆದರೆ ವಿದ್ಯಾರ್ಥಿ ಸ್ನೇಹಿಯಾದ ಸಾಹಿತ್ಯದ ಕವಲುಗಳು ಹತ್ತಾರು ದಾರಿಗಳನ್ನು ಪರಿಚಯಿಸುತ್ತವೆ. ಇಲ್ಲಿನ ವಿಷಯ ವಸ್ತುಗಳು ಕಾಠಿಣ್ಯತೆಯ ಲೇಪವಿಲ್ಲದೆ ವಿದ್ಯಾರ್ಥಿಗಳನ್ನು ಸಹಜವಾಗಿ ಕೈಹಿಡಿದುಕೊಂಡು ಹೋಗುವಂತೆ ಸರಾಗವಾಗಿ ಓದಿಸಿಕೊಂಡು ಹೋಗಬಲ್ಲವು. ಕಾವ್ಯದ ರಸದೌತಣದ ಜೊತೆಗೆ ಕಿರುಕಾದಂಬರಿಯಾನ ವಿದ್ಯಾರ್ಥಿಗಳನ್ನು ಕುತೂಹಲದ ಘಟ್ಟದಲ್ಲಿ ನಿಲ್ಲಿಸುವುದರ ಜೊತೆಗೆ ನೆಲಮೂಲ ಸಂಸ್ಕೃತಿಯನ್ನು ಪರಿಚಯಿಸಬಲ್ಲವು. ವಿದ್ಯಾರ್ಥಿ ಕೌತುಕದ ಮೂಲವೆನಿಸಿದ ಕಥಾಸಾಹಿತ್ಯದ ಮಾದರಿ ಹಾಗೂ ಸಹಜ ಹಾದಿಯ ಪ್ರಬಂಧಗಳು ಕೊನೆಯವರೆಗೆ ವಿದ್ಯಾರ್ಥಿಗಳ ಆಸಕ್ತಿಯನ್ನು ಹಿಡಿದಿಟ್ಟುಕೊಂಡು ಹೋಗಬಲ್ಲವು. ಮನರಂಜನಾತ್ಮಕವಾಗಿ ರಂಜಿಸುವುದರ ಜೊತೆಗೆ ಸಾಹಿತ್ಯ ಮಾದರಿಗಳ ಪರಿಚಯ ಹಾಗೂ ಬದುಕಿನ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಕಲಿಸಿಕೊಡಬಲ್ಲವು. ಸಾಹಿತ್ಯದ ಕಡೆಗೆ ಒಲ್ಲವನ್ನೂ ಮೂಡಿಸಿ ಮುನ್ನಡೆಸಬಲ್ಲವು. ಬರಹಗಾರರನ್ನಾಗಿಯೂ ರೂಪಿಸಬಲ್ಲವು. ಈ ನಿಟ್ಟಿನಲ್ಲಿ ಮುಕ್ತ ಆಯ್ಕೆಯ ವಿಷಯಾಧ್ಯಯನ ಅಗತ್ಯವಾಗಿದೆ.

## ಉದ್ದೇಶಗಳು

1. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಪರಿಚಯಿಸುವುದು. ಮುಖ್ಯವಾಗಿ ಕಾದಂಬರಿ, ಕಥೆ, ನಾಟಕ, ಲಲಿತ ಪ್ರಬಂಧ ಮತ್ತು ಗಜಲುಗಳನ್ನು ಇಂದಿನ ವಿದ್ಯಾರ್ಥಿಗಳಿಗೆ ಪರಿಚಯಿಸುವುದು.
2. ಆಧುನಿಕ ಕನ್ನಡ ಸಾಹಿತ್ಯದದಲ್ಲಿ ಕನ್ನಡದ ಲೇಖಕರು ಹೇಗೆ ತಮ್ಮ ಅಭಿವ್ಯಕ್ತಿಯನ್ನು ಸಾಧಿಸಿದ್ದಾರೆ ಎಂಬುದನ್ನು ವಿವರಿಸುವುದು.
3. ಸಾಹಿತ್ಯದ ವಿವಿಧ ಪ್ರಕಾರಗಳ ಓದಿನ ಕೌಶಲ್ಯ ವರ್ಧನೆಗೆ ಪ್ರೋತ್ಸಾಹಿಸುವುದು.
4. ಮನರಂಜನಾತ್ಮಕ ಮಾರ್ಗದ ಮೂಲಕ ಸಾಹಿತ್ಯ ಪ್ರೀತಿ ಮೂಡಿಸುವುದು.
5. ಆಸಕ್ತರು ಬರಹಗಾರರಾಗಿ ರೂಪಗೊಳ್ಳಲು ಸುಂದರ ಅವಕಾಶವನ್ನು ಒದಗಿಸುವುದು.

## ಫಲಿತಗಳು

1. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಪರಿಚಯಿಸುವುದು. ಮುಖ್ಯವಾಗಿ ಕಾದಂಬರಿ, ಕಥೆ, ನಾಟಕ, ಲಲಿತ ಪ್ರಬಂಧ ಮತ್ತು ಗಜಲುಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಾರೆ. ಇಂದಿನ ವಿದ್ಯಾರ್ಥಿಗಳಿಗೆ ಪರಿಚಯಿಸುವುದು.
2. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾದಂಬರಿ, ಕಥೆ, ನಾಟಕ, ಲಲಿತ ಪ್ರಬಂಧ ಮತ್ತು ಗಜಲುಗಳನ್ನು ಇಂದಿನ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಾರೆ.
3. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತೊಡಗೊಕೊಂಡಿರುವ ಲೇಖಕರನ್ನು ವಿದ್ಯಾರ್ಥಿಗಳು ಗುರುತಿಸಿ ಅವರ ಕೃತಿಗಳನ್ನು ಓದಲು ಪ್ರೇರಣೆ ಸಿಗುತ್ತದೆ ಸಿಗುತ್ತದೆ.
4. ಕನ್ನಡ ಭಾಷೆಗೆ ಮತ್ತು ಕನ್ನಡದ ಸೃಜನಶೀಲ ಬರಹಗಾರರಿಗೆ ಇರುವ ಕತೃತ್ವ ಶಕ್ತಿಯನ್ನು ಮತ್ತು ಅಭಿವ್ಯಕ್ತಿ ಮಾದರಿಗಳನ್ನು ವಿದ್ಯಾರ್ಥಿಗಳು ಕಲಿಯಲು ಅವಕಾಶ ಲಭಿಸಿದಂತಾಗುತ್ತದೆ
5. ಕನ್ನಡ ಸಾಹಿತ್ಯವನ್ನು ಓದುವುದರ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಅನನ್ಯತೆಯನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುತ್ತಾರೆ.
6. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಅಧ್ಯಯನ ಮಾಡುವ ಯುವ ವಿದ್ಯಾರ್ಥಿಗಳು ತಾವೂ ಸಹ ಯಾವುದಾದರೊಂದು ಬರವಣಿಗೆಯ ಪ್ರಕಾರದಲ್ಲಿ ಬರೆಯುವ ಪ್ರೇರಣೆ ದೊರೆಯುತ್ತದೆ.

* * * * *